**ಓ.ಎಸ್ ನಂ. 90/2023 ಡಿ.ಡಬ್ಲ್ಯೂ-1 (ಪ್ರೇಮ)**

**ಸಾಕ್ಷಿಯನ್ನು ದಿನಾಂಕಃ 19.09.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಜಿ ಎನ್ ಎನ್ ವಕೀಲರಿಂದಃ**

ವಾದಿಗಳು ಏನು ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ತಿಳಿದಿರುತ್ತದೆ. ದಾವಾಸ್ತಿಯು ವಾದಿಗಳಿಗೆ ಸೇರಿರುತ್ತದೆ ಎಂದು ದಾವೆ ಮಾಡಿರುತ್ತಾರೆ.

ನಾನು ಮೈಸೂರಿನಲ್ಲಿ ವಾಸವಿರುತ್ತೇನೆ. ನಾನು ಈ ದಿನ ಸಾಕ್ಷಿಯನ್ನು ನನ್ನ ಪರವಾಗಿ ಮತ್ತು ಉಳಿದ ಪ್ರತಿವಾದಿಗಳ ಪರವಾಗಿಯೂ ಸಾಕ್ಷಿ ನುಡಿಯುತ್ತಿದ್ದೇನೆ. ಸಾಕ್ಷಿಯು ಮುಂದುವರಿದು ಈ ದಿನ ನಾನು ಚಾಮಮ್ಮ ಮತ್ತು ಪುಟ್ಟಮ್ಮ ರವರ ಪರವಾಗಿ ಮಾತ್ರ ಸಾಕ್ಷಿ ನುಡಿಯುತ್ತಿದ್ದೇನೆ. ಚಾಮಮ್ಮ ನವರು ಮಂಡ್ಯದಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿಯು ಈಗ ಮೈಸೂರಿನಲ್ಲಿ ವಾಸವಿರುತ್ತಾರೆ ಎಂದು ನುಡಿಯುತ್ತಾರೆ. ಪುಟ್ಟಮ್ಮ ನವರು ನನ್ನ ಜೊತೆಯಲ್ಲಿಯೇ ಮೈಸೂರಿನಲ್ಲಿರುತ್ತಾರೆ.

ಸಿದ್ದೇಗೌಡ ರವರು ಬದುಕ್ಕಿದ್ದಾಗ ಬೊಪ್ಪನಹಳ್ಳಿಯಲ್ಲಿ ವಾಸವಾಗಿದ್ದರು. ಸಿದ್ದೇಗೌಡ ರವರು ಮೂಲತಃ ಹೆಚ್ ಡಿ ಕೋಟೆಯ ಮಲಾರದ ಹುಂಡಿ ಗ್ರಾಮದಲ್ಲಿ ವಾಸವಾಗಿದ್ದರು. ಸದರಿ ಸಿದ್ದೇಗೌಡ ರವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ಸದರಿ ಸಿದ್ದೇಗೌಡ ರವರು ಮಲಾರದ ಹುಂಡಿ ಗ್ರಾಮದ ಬೋರೇಗೌಡರ ಮಗ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸಾಕ್ಷಿಗೆ ದಾವಾಸ್ತಿ ಮೂಲತಃ ಯಾರಿಗೆ ಸೇರಿತ್ತು ಎಂದರೆ ಸಾಕ್ಷಿಯು ನನ್ನ ತಂದೆ ಸಿದ್ದೇಗೌಡರಿಗೆ ಸೇರಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆಯವರು

ದಾವಾಸ್ತಿಯನ್ನು ಸಂಪಾದನೆ ಮಾಡಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ತಂದೆಯವರಿಗೆ ಸಂಪಾದನೆ ಮಾಡಿ ದಾವಾಸ್ತಿಯು ಬಂದಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾಸ್ತಿಯು ಮೂಲತಃ ದೇವಮ್ಮನವರ ಮಗ ಜವರೇಗೌಡ ಎಂಬುವರಿಗೆ ದಿಃ 19.05.1959 ರಲ್ಲಿ ಕ್ರಯಪತ್ರದ ಮೂಲಕ ಕ್ಯಾತನಾಯಕ ಮತ್ತು ರಾಮನಾಯಕ ರವರಿಂದ ಖರೀದಿ ಮಾಡಿ ಬಂದಿರುತ್ತದೆ ಎಂದರೆ ಸರಿ. ಸದರಿ ದೇವಮ್ಮ ನವರಿಗೆ ಜವರೇಗೌಡ ಮತ್ತು ಸಣ್ಣಮ್ಮ ಎಂಬ ಮಕ್ಕಳು ಇದ್ದರು ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ದೇವಮ್ಮ ನವರ ಮಗ ಜವರೇಗೌಡ ರವರಿಗೆ ಮದುವೆ ಯಾಗಿರಲಿಲ್ಲ ಎಂದರೆ ಸರಿ. ಸದರಿ ಜವರೇಗೌಡ ರವರು ಮದುವೆಯಾಗದೇ ತೀರಿಕೊಂಡಿದ್ದರಿಂದ ಅವರ ತಂಗಿಯವರು ಕಾನೂನು ಬದ್ಧ ವಾರಸುದಾರರಾಗಿದ್ದುದ್ದರಿಂದ ದಾವಾಸ್ತಿಯು ಅವರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ಜವರೇಗೌಡ ಮತ್ತು ಸಣ್ಣಮ್ಮ ರವರು ಬದುಕ್ಕಿದ್ದಾಗ ನಾನು ಹುಟ್ಟೇ ಇರಲಿಲ್ಲ ಎಂದರೆ ಸರಿ.

ದೇವಮ್ಮ ನವರ ಮಗಳು ಸಣ್ಣಮ್ಮ ನವರು ನಂಜೇಗೌಡ ಎಂಬುವರ ಜೊತೆ ಮದುವೆ ಆಗಿದ್ದರು ಎಂದರೆ ಸರಿ. ಸದರಿ ಸಣ್ಣಮ್ಮ ಮತ್ತು ನಂಜೇಗೌಡರಿಗೆ ಸಣ್ಣತಾಯಮ್ಮ ಉ. ಜವರಮ್ಮ ಎಂಬ ಮಗಳು ಇದ್ದರು ಎಂದರೆ ಸರಿ. ಸದರಿ ಸಣ್ಣತಾಯಮ್ಮ ಉ. ಜವರಮ್ಮ ನವರು ಸಿದ್ದೇಗೌಡ ಎಂಬವರಿಗೆ ಕೊಟ್ಟು ಮದುವೆ ಮಾಡಲಾಗಿರುತ್ತದೆ ಎಂದರೆ ಸರಿ. ಸದರಿ ಸಿದ್ದೇಗೌಡರೇ ಈ ದಾವೆಯ ವಾದಿಗಳ ತಂದೆ ಎಂದರೆ ಸರಿ. ಸದರಿ ಸಣ್ಣತಾಯಮ್ಮ ಉ. ಜವರಮ್ಮ ನವರು 45 ವರ್ಷಗಳ ಹಿಂದೆಯೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸಣ್ಣತಾಯಮ್ಮ ಉ. ಜವರಮ್ಮ ನವರಿಗೆ ವಾದಿಗಳು ಮಕ್ಕಳಾಗಿರುತ್ತಾರೆ ಎಂದರೆ ಸಾಕ್ಷಿಯು ಅವರಿಗೆ ಒಟ್ಟು 4 ಜನ ಮಕ್ಕಳು ವಾದಿಗಳು ಮತ್ತು ದೇವಮ್ಮ ಎಂಬ ಮಗಳು ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದೇವಮ್ಮ ನವರು ಬೊಪ್ಪನಹಳ್ಳಿಯ ನಾಗರಾಜೇಗೌಡ ಎಂಬುವರನ್ನು ವಿವಾಹವಾಗಿ ಅಲ್ಲಿಯೇ

ಇರುತ್ತಾರೆ. ಸದರಿ ಸಣ್ಣತಾಯಮ್ಮ ಉ. ಜವರಮ್ಮನವರಿಗೆ 4 ಜನ ಮಕ್ಕಳು ಎಂದು ತೋರಿಸಲು ನನ್ನ ಬಳಿ ದಾಖಲಾತಿಗಳು ಇರುತ್ತವೆ. ಸದರಿ ಸಣ್ಣತಾಯಮ್ಮ ಉ. ಜವರಮ್ಮ ನವರು ಬದುಕಿದ್ದ ಸಮಯದಲ್ಲಿ ವಾದಿಗಳು ಮತ್ತು ಅವರ ತಾಯಿ ಎಲ್ಲಾರು ಒಟ್ಟಾಗಿ ದಾವಾಸ್ತಿಯಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

ನನ್ನ ತಂದೆ ಸಿದ್ದೇಗೌಡ ರವರು ಜವರೇಗೌಡರ ದತ್ತು ಮಗ ಆಗಿರುತ್ತಾರೆ. ಸಿದ್ದೇಗೌಡ ರವರು ಜವರೇಗೌಡರ ದತ್ತು ಮಗ ಅಲ್ಲ ಸಿದ್ದೇಗೌಡರಿಗೂ ಮತ್ತು ಜವರೇಗೌಡರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಸಿದ್ದೇಗೌಡ ರವರು ಜವರೇಗೌಡ ಎಂಬುವರಿಗೆ ದತ್ತು ಮಗ ಎಂದು ತೋರಿಸಲು ಯಾವುದೇ ದಾಖಲಾತಿಗಳು ಇರುವುದಿಲ್ಲ.

ಸಣ್ಣತಾಯಮ್ಮ ಉ. ಜವರಮ್ಮರವರನ್ನು ಸಿದ್ದೇಗೌಡರು ಮದುವೆಯಾದ ನಂತರ ಸದರಿ ಸಿದ್ದೇಗೌಡರು ಸಣ್ಣತಾಯಮ್ಮ ನವರ ಮನೆಯಲ್ಲಿಯೇ ಬಂದು ವಾಸವಾಗಿದ್ದರು ಎಂದರೆ ಸರಿ. ಸಿದ್ದೇಗೌಡರು ಮದುವೆಯಾಗುವ ಸಮಯದಲ್ಲಿ ಜವರೇಗೌಡರವರು ಬದುಕಿರಲಿಲ್ಲ ಎಂದರೆ ಸರಿಯಲ್ಲ. ಜವರೇಗೌಡರು ತೀರಿಕೊಂಡ ನಂತರ ಅವರ ತಂಗಿ ಸಣ್ಣಮ್ಮ ನವರ ಹೆಸರಿಗೆ ದಾವಾಸ್ತಿಯು ಬಂದಿರುತ್ತದೆ ಎಂದರೆ ಸರಿಯಲ್ಲ. ಸಣ್ಣಮ್ಮ ನವರು ತೀರಿಕೊಂಡ ನಂತರ ಅವರ ಮಗಳು ಸಣ್ಣತಾಯಮ್ಮ ನವರ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸಣ್ಣತಾಯಮ್ಮ ನವರು ತೀರಿಕೊಂಡ ನಂತರ ಸಿದ್ದೇಗೌಡರ ಹೆಸರಿಗೆ ದಾವಾಸ್ತಿಯ ಖಾತೆ ಬಂದಿರುತ್ತದೆ ಎಂದರೆ ಸಾಕ್ಷಿಯು ಸಣ್ಣತಾಯಮ್ಮ ನವರ ಹೆಸರಿಗೆ ಖಾತೆ ಬಂದಿರುವುದೇ ಇಲ್ಲ ಸೀದಾ ಸಿದ್ದೇಗೌಡರ ಹೆಸರಿಗೆ ದಾವಾಸ್ತಿ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸಣ್ಣತಾಯಮ್ಮ ನವರು ತೀರಿಕೊಂಡ ನಂತರ ಸಿದ್ದೇಗೌಡರ ಬೊಪ್ಪನಹಳ್ಳಿಯಲ್ಲಿಯೇ ವಾಸವಾಗಿದ್ದರು.

ನನ್ನ ತಾಯಿ ಪುಟ್ಟಮ್ಮ ನವರು ಮೂಲತಃ ಹೆಚ್ ಡಿ ಕೋಟೆ ತಾಲ್ಲೂಕು, ಜಕ್ಕಳ್ಳಿ ಮಾಳದವರು. ಸಿದ್ದೇಗೌಡರ ಹೆಸರಿಗೆ ಖಾತಯಾಗುವ ಸಂದರ್ಭದಲ್ಲಿ ವಾದಿಗಳು ಅವರ ಜೊತೆಯಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ.

ಸದರಿ ಸಣ್ಣತಾಯಮ್ಮ ನವರ ಗಂಡ ಸಿದ್ದೇಗೌಡ ಮತ್ತು ನಿಮ್ಮ ತಂದೆ ಸಿದ್ದೇಗೌಡ ಇಬ್ಬರೂ ಒಂದೇ ಆಗಿರುತ್ತಾರೆ ಎಂದರೆ ಇಬ್ಬರೂ ಒಂದೇ ಎಂದು ನುಡಿಯುತ್ತಾರೆ. ಸದರಿ ಸಣ್ಣತಾಯಮ್ಮ ನವರು ತೀರಿಕೊಂಡ ನಂತರ ಪುಟ್ಟಮ್ಮ ನವರು ಸಿದ್ದೇಗೌಡರ ಜೊತೆಯಲ್ಲಿ ಅನೈತಿಕವಾಗಿ ಸಂಬಂಧದಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಸಿದ್ದೇಗೌಡರ ಜೊತೆಯಲ್ಲಿ ಪುಟ್ಟಮ್ಮನವರದು ಯಾವ ರೀತಿಯ ಸಂಬಂದ ಎಂದರೆ ಸಾಕ್ಷಿಯು ನಮ್ಮ ತಾಯಿಯವರು ಸದರಿ ಸಿದ್ದೇಗೌಡರವನ್ನು ಮದುವೆ ಮಾಡಿಕೊಂಡಿರುತ್ತಾರೆ ಅವರು ಪುಟ್ಟೇಗೌಡರ 2 ನೇ ಹೆಂಡತಿ ಎಂದು ನುಡಿಯುತ್ತಾರೆ. ಸದರಿರವರುಗಳ ಮದುವೆಯು ಮಟಕೆರೆಯ ದೇವಾಸ್ಥಾನದಲ್ಲಿ ನಡೆದಿರುತ್ತದೆ. ಸದರಿ ಮಟಕೆರೆಯ ದೇವಾಸ್ಥಾನದಲ್ಲಿ ಮದುವೆಯಾದ ಬಗ್ಗೆ ನಮ್ಮ ಬಳಿ ದಾಖಲಾತಿ ಇರುವುದಿಲ್ಲ, ಸಾಕ್ಷಿಯು ಮುಂದುವರಿದು ಸುಮಾರು 53 ವರ್ಷದ ಹಿಂದೆ ಮದುಮೆ ಮಾಡಿಕೊಂಡು ಕರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಂತರದಲ್ಲಿ ನನ್ನ ತಾಯಿ ಪುಟ್ಟಮ್ಮ ಮತ್ತು ಸಿದ್ದೇಗೌಡರವರು ಬೊಪ್ಪನ ಹಳ್ಳಿಯಲ್ಲಿ ವಾಸವಾಗಿರುತ್ತಾರೆ. ಆ ಸಮಯದಲ್ಲಿ ವಾದಿಗಳು ಮತ್ತು ನಾವು, ನಮ್ಮ ತಾಯಿ, ನಮ್ಮ ತಂದೆ ಸಿದ್ದೇಗೌಡರ ರವರು ಬೇರೆ ಬೇರೆಯಾಗಿ ವಾಸವಿದ್ದೇವು. ಬೇರೆ ಬೇರೆ ವಾಸವಿದ್ದ ಸಮಯದಲ್ಲಿ ವಾದಿಗಳೇ ದಾವಾಸ್ತಿಯನ್ನು ಅನುಭವಿಸಿಕೊಂಡು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ದಾವಾಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೆವು ಎಂದು ನುಡಿಯುತ್ತಾರೆ. ನೀವೇ ದಾವಾಸ್ತಿಯಲ್ಲಿ ಸ್ವಾಧೀನದಲ್ಲಿ ಇದ್ದ ಬಗ್ಗೆ ದಾಖಲಾತಿ ಇರುತ್ತದೆಯೇ ಎಂದರೆ ಸಾಕ್ಷಿಯು

ದಾಖಲಾತಿ ಇರುವುದಿಲ್ಲ ಎಂದು ನುಡಿದು ಮುಂದುವರಿದು ನಾವು ಮತ್ತು ಅಣ್ಣಂದಿರಾದ ವಾದಿಗಳು ಭಾಗ ಮಾಡಿಕೊಂಡು ಸ್ವಾಧೀನದಲ್ಲಿದ್ದೇವು ಎಂದು ನುಡಿಯುತ್ತಾರೆ. ಸದರಿ ಭಾಗ ಮಾಡಿಕೊಂಡ ಬಗ್ಗೆ ದಾಖಲಾತಿ ಇರುತ್ತದೆಯೇ ಎಂದರೆ ಸಾಕ್ಷಿಯು ದಾಖಲಾತಿಗಳು ಇರುವುದಿಲ್ಲ ನಮ್ಮ ತಂದೆಯವರೇ ಹಂಚಿದ್ದರು ಎಂದು ನುಡಿಯುತ್ತಾರೆ. ಸದರಿ ಸಿದ್ದೇಗೌಡರ ಹೆಸರಿನಲ್ಲಿ ದಾವಾಸ್ತಿಯ ಖಾತೆ ಇತ್ತು ವಿನಾಃ ಅವರಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇರಲ್ಲಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯು ಸಿದ್ದೇಗೌಡರ ಹೆಸರಿಗೆ ಅವರ ಹೆಂಡತಿ ಸಣ್ಣತಾಯಮ್ಮನವರು ತೀರಿಕೊಂಡ ನಂತರ ಬಂದಿರುವುದರಿಂದ ಸದರಿ ಸಿದ್ದೇಗೌಡರಿಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ಸಣ್ಣತಾಯಮ್ಮನವರ ಮಕ್ಕಳಿಗೆ ಮಾತ್ರ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲೀಗೆ ವಾದಿ ಪರ ವಕೀಲರು ಸಮಯ ಕೋರಿದ್ದು, ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ